**SET-4**

**Series #CDBA/S**

**Q.P. Code 13/S**

Roll No. | | | | | | | | |

Candidates must write the Q.P. Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **19** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಈ ಪ್ರಶ್ನೆ ಪತ್ರಿಕೆಯಲ್ಲಿ **15** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

- Please check that this question paper contains **19** printed pages.
- Please check that this question paper contains **15** questions.
- Q.P. Code given on the right hand side of the question paper should be written on the title page of the answer-book by the candidate.
- **Please write down the serial number of the question in the answer-book before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : **3** ಗಂಟೆ* — *ಗರಿಷ್ಠ ಅಂಕಗಳು : **80***

*Time allowed : **3** hours* — *Maximum Marks : **80***

## General Instructions :

*Read the following instructions carefully and follow :*

*(i)* *This question paper contains* ***A, B, C*** *and* ***D four (4)*** *Sections and It has total* ***15*** *questions.*

*(ii)* ***Section A*** *: (Unseen Comprehension (Passage) Question No.* ***1*** *and* ***2****.*
*Seen Comprehension (Press & Poem) Question No.* ***3*** *and* ***4****.*

*(iii)* ***Section B*** *: MCQs (Grammar) Question No.* ***5*** *to* ***6****. MCQs (Non-detailed portion) Question No.* ***7****.*

*(iv)* ***Section C*** *: Writing Skill (Letter writing, Report & Essay writing) Question No.* ***8*** *to* ***10****.*

*(v)* ***Section D*** *: Descriptive type. Question No.* ***11*** *to* ***15****.*
*Attempt questions as per specific instructions.*

## ಸಾಮಾನ್ಯ ಸೂಚನೆಗಳು :

**ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿ :**

*(i)* ಈ ಪ್ರಶ್ನೆ ಪತ್ರಿಕೆಯು **A, B, C** ಮತ್ತು **D** ಎಂಬ **ನಾಲ್ಕು (4)** ಭಾಗಗಳನ್ನು ಮತ್ತು ಒಟ್ಟು **15** ಪ್ರಶ್ನೆಗಳನ್ನು ಒಳಗೊಂಡಿದೆ.

*(ii)* ಭಾಗ **A,** ವಾಚನ ಮತ್ತು ಗ್ರಹಿಕಾ ಕೌಶಲ್ಯ ಅಪ್ರಕಟಿತ ಗದ್ಯಭಾಗ ಪ್ರಶ್ನೆ ಸಂಖ್ಯೆ **1** ಮತ್ತು **2**. ಪ್ರಕಟಿತ ಗದ್ಯಭಾಗ ಪ್ರಶ್ನೆ ಸಂಖ್ಯೆ **3** ಮತ್ತು **4**.

*(iii)* ಭಾಗ **B,** ಬಹು ಆಯ್ಕೆ ಪ್ರಶ್ನೆಗಳು (ಅನ್ವಯಿಕ ವ್ಯಾಕರಣ) ಪ್ರಶ್ನೆ ಸಂಖ್ಯೆ **5** ಮತ್ತು **6.** ಬಹು ಆಯ್ಕೆ ಪ್ರಶ್ನೆಗಳು (ಪಾಠ್ಯಪೂರಕ ಅಧ್ಯಯನ) ಪ್ರಶ್ನೆ ಸಂಖ್ಯೆ **7**.

*(iv)* ಭಾಗ **C,** ಬರವಣಿಗೆ ಕೌಶಲ್ಯ (ಪತ್ರ, ವರದಿ ಮತ್ತು ಪ್ರಬಂಧ) ಪ್ರಶ್ನೆ ಸಂಖ್ಯೆ **8** ರಿಂದ **10**.

*(v)* ಭಾಗ **D,** ವಿವರಣಾತ್ಮಕ ಪ್ರಕಾರ ಪ್ರಶ್ನೆ ಸಂಖ್ಯೆ **11** ರಿಂದ **15**.

ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನೀಡಿರುವ ಸೂಚನೆಗಳನ್ನು ಗಮನಿಸಿ.

## ಭಾಗ – A
## (ವಾಚನ ಮತ್ತು ಗ್ರಹಿಕಾ ಕೌಶಲ್ಯ) : 20 ಅಂಕಗಳು

1. ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : *5×1=5*

ತಾಯಿ ಹಕ್ಕಿಯು ತನ್ನ ಮರಿಹಕ್ಕಿ ಮೊಟ್ಟೆಯೊಡೆದು ಹೊರ ಬಂದ ಕ್ಷಣದಿಂದ, ದೊಡ್ಡದಾಗುವವರೆಗೆ ದಿನದಿಂದ ದಿನಕ್ಕೆ ಆಹಾರ ಬದಲಿಸುತ್ತ ಬರುತ್ತದೆ. ಅಂದರೆ ಮೊದಲು ಸಣ್ಣ ಮರಿಗಳ ಕರುಳು ಮತ್ತು ಕಂಠಕ್ಕೆ ಸುಲಭವಾಗಿ ಒಗ್ಗುವಂತಹ ಮೆದು ಆಹಾರ. ನಂತರ ನಿಧಾನವಾಗಿ ಗಟ್ಟಿ ಆಹಾರ ಹೀಗೆ, ಪ್ರತಿ ಪ್ರಭೇದವೂ ತಮ್ಮದೇ ಆಹಾರ ನಿಯಮವನ್ನು ಪಾಲಿಸುತ್ತದೆ. ರೆಕ್ಕೆ ಬಲಿತ ಮೇಲೆ ಗೂಡುಬಿಟ್ಟು ಹೊರಬರುವಂತೆ ಪ್ರೇರೇಪಿಸುತ್ತದೆ ಅವುಗಳೆದುರು ಕುಳಿತು ರೆಕ್ಕೆ ಬಡಿದು ಹೀಗೆ ಹಾರಬೇಕೆಂದು ತೋರಿಸಿಕೊಡುತ್ತದೆ. ಹೇಗೆ ಹುಳುವನ್ನು ಹಿಡಿಯಬೇಕು, ಯಾವುದನ್ನು ತಿನ್ನಬೇಕು. ಯಾವುದನ್ನು ತಿನ್ನಬಾರದು, ಪ್ರತಿಯೊಂದನ್ನೂ ಕಲಿಸಿಕೊಡುತ್ತದೆ. ಈ ವಿದ್ಯೆಗಳಲ್ಲಿ ಯಾವೊಂದನ್ನೂ ತಿಳಿದಿಲ್ಲವಾದರೂ ಆ ಹಕ್ಕಿ ಮರಿಗಳು ಜೀವನಸಂಗ್ರಾಮದಲ್ಲಿ ಬದುಕಿ ಉಳಿಯುವುದು ಅಸಂಭವ. ಇವುಗಳನ್ನೆಲ್ಲಾ ಕಲಿಯುವ ಮೊದಲೇ ಆ ಮರಿಗಳ ತಾಯಿಹಕ್ಕಿ ಶತ್ರುವಿನ ಬಾಯಿಗೆ ಆಹಾರವಾಗಿ ಅಸುನೀಗಿದರೆ, ಮರಿಹಕ್ಕಿಗಳೂ ಸತ್ತಂತೆಯೇ. ನಮಗೆ ಮೇಲುನೋಟಕ್ಕೆ ತಂತಾನೆ ಎಲ್ಲ ಸಲೀಸಾಗಿ ನಡೆದುಕೊಂಡು ಹೋಗುತ್ತಿರುವಂತೆ ಕಂಡರೂ, ಮಾನವ ಸಮಾಜವನ್ನು ಮೀರಿದ ಜಟಿಲ ಕ್ರಿಯಾವಳಿಗಳು ಅಲ್ಲಿ ನಡೆಯುತ್ತಿರುತ್ತವೆ.

ಹಕ್ಕಿಗಳು ತುಂಬಾ ಶುಚಿಯಾದ ಜೀವಿಗಳು, ನಾವು ಕೊಳಕು ಮೆತ್ತಿದ ಹಕ್ಕಿಗಳನ್ನು ಕಾಣುವುದೇ ಇಲ್ಲ, ಏಕೆಂದರೆ ಅವು ಆಗಾಗ ನೀರಿನಲ್ಲಿ ಸ್ನಾನ ಮಾಡುತ್ತವೆ. ಕೊಕ್ಕೆಗಳನ್ನಂತೂ ಮರದ ಸಣ್ಣ ಟೊಂಗೆಗೆ ಆ ಪಕ್ಕಕ್ಕೊಮ್ಮೆ – ಈ ಪಕ್ಕಕ್ಕೊಮ್ಮೆ ತಿಕ್ಕುತ್ತಾ, ಮೆತ್ತಿಕೊಂಡ ಆಹಾರವನ್ನು ಒರೆಸಿಹಾಕಿ ಶುಭ್ರಗೊಳಿಸಿಕೊಳ್ಳುತ್ತದೆ. ಹಕ್ಕಿಗಳ ಗರಿಗಳಲ್ಲಿ ಸಣ್ಣ ಸಣ್ಣ ಕೂದಲಿನಂಥ ಎಳೆಗಳಿರುವುದರಿಂದ ಅವುಗಳಿಗೂ ಮನುಷ್ಯರಂತೆಯೇ

ಹೇನುಗಳ ಕಾಟ ! ಕೈಗಳೇ ಇಲ್ಲದ ಹಕ್ಕಿಗಳು ತಮ್ಮ ಕೊಕ್ಕಿನ ಚೂಸಿನಿಂದಲೇ ಹೇನುಗಳನ್ನು ನಿವಾರಿಸಿಕೊಳ್ಳುತ್ತವೆ. ಈ ವಿಚಾರದಲ್ಲಿ ಸಂಗಾತಿಗಳು ಒಬ್ಬರಿಗೊಬ್ಬರು ಸಹಾಯ ಮಾಡುವುದೂ ಎಂಟು. ಗಂಡಿನ ದೇಹದಲ್ಲಿನ ಹೇನನ್ನು ಹೆಣ್ಣು, ಹೆಣ್ಣಿಗೆ ಗಂಡೂ ಪರಸ್ಪರ ತೆಗೆದು ಶುದ್ಧಗೊಳಿಸುವುದನ್ನು (ಟೆಲಿಫೋನ್ ತಂತಿಗಳ ಮೇಲೆ ಕುಳಿತು) ನಾವು ಕಾಣಬಹುದು. ಹೇನಿನ ನಿವಾರಣೆಗೆ ಹಕ್ಕಿಗಳು ಇನ್ನೂ ಒಂದು ಉಪಾಯವನ್ನು ಮಾಡುತ್ತವೆ. ಇರುವೆ ಗೂಡಿನ ಮೇಲೆ ರೆಕ್ಕೆಯಗಲಿಸಿ ಮಲಗುತ್ತವೆ. ಇರುವೆಗಳು ಹೇನನ್ನು ಹಿಡಿದು ತಿನ್ನುತ್ತವೆ. ಚೂಪುಕೊಕ್ಕಿನ ಮೈನಾ ಮುಂತಾದ ಹಕ್ಕಿಗಳು, ಹಸು, ಎಮ್ಮೆ, ಎತ್ತು ಮತ್ತು ಕೋಣ ಇವುಗಳಿಗೆ ರಕ್ತಹೀರಿ ಕಾಟ ಕೊಡುವ ಕ್ರಿಮಿಗಳನ್ನು ಹಿಡಿದು ತಿಂದು, ಆ ಪ್ರಾಣಿಗಳಿಗೂ ಸಹಾಯ ಮಾಡುತ್ತವೆ. ಪ್ರಕೃತಿಯ ನಿಯಮಗಳು ಎಷ್ಟೊಂದು ವಿಚಿತ್ರ ! ಒಂದು ಪ್ರಾಣಿ ಮತ್ತೊಂದನ್ನು ತಿಂದು ಬದುಕುವುದೂ, ಒಂದು ಮತ್ತೊಂದರ ಸಂಕಟ ನಿವಾರಿಸುವುದೂ ಎರಡು ಒಟ್ಟೊಟ್ಟಿಗೆ ನಡೆಯುತ್ತದೆ.

ಹಕ್ಕಿಗಳು ನಮಗಿಂತ ಬಹು ಮುಂಚಿನಿಂದಲೂ ಈ ಭೂಮಿಯಲ್ಲಿ ಬಾಳಿ ಬದುಕಿವೆ. ನಾವಿಲ್ಲದೇ ಇದ್ದರೂ ಅವು ಆನಂದದಿಂದ ಬದುಕಿರಬಲ್ಲವು, ಆದರೆ ಅವುಗಳಿಲ್ಲದೇ ನಾವು ಸುಖವಾಗಿ ಬಾಳಲಾಗುವುದಿಲ್ಲ. ಮುಖ್ಯವಾಗಿ ಕ್ರಿಮಿಕೀಟ ನಿಯಂತ್ರಣ, ಬೀಜಪ್ರಸರಣ, ಪರಾಗಸ್ಪರ್ಶ, ಪರಿಸರ ನೈರ್ಮಲ್ಯ ಇವುಗಳಲ್ಲಿ ಹಕ್ಕಿಗಳ ಪಾತ್ರ ದೊಡ್ಡದು. ಅವುಗಳ ಮೂಲಭೂತ ಅವಶ್ಯಕತೆಗಳಾದ ಆಹಾರ–ನೀರು–ವಸತಿಗಳನ್ನು ನಾವಿಂದು ವಿವೇಚನಾ ರಹಿತವಾಗಿ ನಾಶಪಡಿಸುತ್ತಿರುವುದರಿಂದ ಅವುಗಳು ಅಪಾರ ಸಂಖ್ಯೆಯಲ್ಲಿ ಕಣ್ಮರೆಯಾಗುತ್ತಿವೆ. ಮನುಷ್ಯ ವಾತಾವರಣದ ಗಾಳಿಯನ್ನು ಮಲೀನ ಮಾಡುತ್ತಿದ್ದಾನೆ. ನೀರಿನ ಮೂಲಗಳನ್ನೆ ಮುಚ್ಚಿ ಬಿಡುತ್ತಿದ್ದಾನೆ. ಮರಗಳನ್ನು ಕಡಿಯುತ್ತಿದ್ದಾನೆ. ಕಾಡುಗಳನ್ನು ನೆಲಸಮ ಮಾಡುತ್ತಾದ್ದಾನೆ. ಪಾಪದ ಹಕ್ಕಿಗಳು ಎಲ್ಲಿಗೆ ಹೋಗಬೇಕು ? ನಮ್ಮಂತೆಯೇ ಬದುಕುವ ಹಕ್ಕೂ ಅವುಗಳಿಗೂ ಇದೆಯಲ್ಲವೇ ?

**ಪ್ರಶ್ನೆಗಳು :**

(i) ತಾಯಿ ಹಕ್ಕಿಯು ಮರಿಹಕ್ಕಿಗೆ ದೊಡ್ಡದಾಗುವವರೆಗೆ ಆಹಾರ ಬದಲಿಸಲು ಕಾರಣ

(A) ಸಣ್ಣಮರಿಗಳು ತಿನ್ನ ಬಹುದಾದಂತಹ ಆಹಾರ

(B) ಸಣ್ಣಮರಿಗಳ ಕರುಳಿಗೆ ಒಗ್ಗುವಂತಹ ಆಹಾರ

(C) ಸಣ್ಣಮರಿಗಳ ಕಂಠಕ್ಕೆ ಒಗ್ಗುವಂತಹ ಆಹಾರ

(D) ಸಣ್ಣಮರಿಗಳ ಕರುಳು ಮತ್ತೆ ಕಂಠಕ್ಕೆ ಒಗ್ಗುವಂತಹ ಆಹಾರ

(ii) ಹಕ್ಕಿಗಳು ತುಂಬಾ ___________ ಜೀವಿಗಳು.

(A) ಶುಭ್ರವಾದ

(B) ಶುಚಿಯಾದ

(C) ಪರಿಶ್ರಮ

(D) ಆಲಸಿ

(iii) ಹಕ್ಕಿಗಳು ಹೇನುಗಳ ಕಾಟವನ್ನು ನಿವಾರಿಸಿಕೊಳ್ಳಲು ಅನುಸರಿಸುವ ಕ್ರಮಗಳು

1. ತಮ್ಮ ಕೊಕ್ಕಿನ ಚೂಪುನಿಂದ

2. ಸಂಗಾತಿಗಳ ಸಹಾಯದಿಂದ

3. ರೆಕ್ಕೆ ಬಿಚ್ಚಿ ಬಿಸಿಲಲ್ಲಿ ಕುಳಿತುಕೊಳ್ಳುವ ಮೂಲಕ

4. ಇರುವೆಗಳ ಸಹಾಯದಿಂದ

ಸರಿ ಉತ್ತರ ಆರಿಸಿ :

(A) 1, 2, 3 (B) 1, 3, 4

(C) 2, 4, 5 (D) 1, 2, 4

(iv) ಇವುಗಳಲ್ಲಿ ಹಕ್ಕಿಗಳ ಪಾತ್ರ ದೊಡ್ಡದು

1. ಕ್ರಿಮಿಕೀಟ ನಿಯಂತ್ರಣ, ಪರಾಗಸ್ಪರ್ಶ

2. ಪರಿಸರ ನೈರ್ಮಲ್ಯ, ವಲಸೆ ಹೋಗುವುದು

3. ಬೀಜ ಪ್ರಸರಣ, ಪರಿಸರ ನೈರ್ಮಲ್ಯ

4. ವಲಸೆ ಹೋಗುವುದು, ಪರಾಗಸ್ಪರ್ಶ

ಸರಿ ಉತ್ತರ ಆರಿಸಿ :

(A) 1 ಮತ್ತು 2 (B) 3 ಮತ್ತು 4

(C) 1 ಮತ್ತು 3 (D) 2 ಮತ್ತು 4

**2.** ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : *5×1=5*

ನಾವು ಸೌರಶಕ್ತಿಯನ್ನು ಹಲವು ವಿಧಗಳಲ್ಲಿ ಹಿಡಿದಿಟ್ಟುಕೊಳ್ಳಬಹುದು. ಇದನ್ನು ಮಾಡಲು ಅತ್ಯಂತ ಪರಿಣಾಮಕಾರಿ ಮಾರ್ಗವೆಂದರೆ, ಸೌರ ವಿದ್ಯುತ್ ಸ್ಥಾವರಗಳನ್ನು ಬಳಸುವುದು. ಈ ವಿದ್ಯುತ್ ಸ್ಥಾವರಗಳ ವಿನ್ಯಾಸವು ದೊಡ್ಡ ಮಟ್ಟದಲ್ಲಿ ವಿದ್ಯುತ್ ಉತ್ಪಾದಿಸಲು ಸಹಾಯ ಮಾಡುತ್ತದೆ. ಸೌರಶಕ್ತಿಯಲ್ಲಿ ಕೆಲಸ ಮಾಡುವ ಇತರ ಉಪಕರಣಗಳೆಂದರೆ, ಸೌರ ಕುಕ್ಕರ್‌ಗಳು, ಹೀಟರ್‌ಗಳು ಮತ್ತು ಕೋಶಗಳು. ಸೋಲಾರ್ ಕುಕ್ಕರ್‌ಗಳು ಇತ್ತೀಚಿನ ದಿನಗಳಲ್ಲಿ ಅಡುಗೆ ಮಾಡುವ ಅತ್ಯಂತ ನವೀನ ವಿಧಾನ. ಇದು ಅನಿಲ, ಸೀಮೆಎಣ್ಣೆ ಮತ್ತು ಸೌದೆಯಂತಹ ಸಾಂಪ್ರದಾಯಿಕ ಇಂಧನಗಳಿಗೆ ಉತ್ತಮ ಪರ್ಯಾಯವಾಗಿದೆ. ಅಲ್ಲದೆ ಪರಿಸರ ಸ್ನೇಹ ಮತ್ತು ಅಗ್ಗದ ಅಡುಗೆ ಸಾಧನ.

ಅಂತೆಯೇ, ಬಹಳಷ್ಟು ಕ್ಯಾಲ್ಕುಲೇಟರ್‌ಗಳು ಮತ್ತು ಮಣಿಕಟ್ಟಿನ ಗಡಿಯಾರ ಈ ತಂತ್ರಜ್ಞಾನದೊಂದಿಗೆ ಕಾರ್ಯ ನಿರ್ವಹಿಸುತ್ತವೆ. ಸೌರಶಕ್ತಿಯ ಪ್ರಮುಖ ಪ್ರಯೋಜನವೆಂದರೆ ಇದು ನವೀಕರಿಸಬಹುದಾದ ಮೂಲವಾಗಿದ್ದು, ವಿದ್ಯುತ್ ಬಿಲ್ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಪೆಟ್ರೋಲಿಯಂ ಮತ್ತು ಕಲ್ಲಿದ್ದಲಿನಂತಹ ನವೀಕರಿಸಲಾಗದ ಶಕ್ತಿಯ ಮೂಲಗಳ ಮೇಲೆ ನಾವು ಕಡಿಮೆ ಅವಲಂಬಿತವಾಗುತ್ತೇವೆ.

ಇದು ಶುದ್ಧ ಇಂಧನವಾಗಿದ್ದು ಇದನ್ನು ಬಳಸುವುದರಿಂದ ಮಾಲಿನ್ಯ ಉಂಟಾಗದು, ಪರಿಸರಕ್ಕೆ ಹಾನಿಯಾಗುವುದಿಲ್ಲ. ಪರಿಣಾಮವಾಗಿ ವಾಯು ಮಾಲಿನ್ಯವು ಗಣನೀಯವಾಗಿ ಕಡಿಮೆಯಾಗುತ್ತದೆ. ಸರ್ಕಾರ ಈ ಶಕ್ತಿಯನ್ನು ನಮ್ಮ ದೈನಂದಿನ ಜೀವನದಲ್ಲಿ ಉತ್ತೇಜಿಸಲು ಮತ್ತು ಅಳವಡಿಸಲು ಪ್ರಯತ್ನಿಸಬೇಕು. ಇದು ಜಗತ್ತನ್ನು ಹಸಿರು ಮತ್ತು ಸ್ವಚ್ಛ ಸ್ಥಳವನ್ನಾಗಿ ಮಾಡುತ್ತದೆ. ಜಗತ್ತನ್ನು ಉತ್ತಮ ಸ್ಥಳವನ್ನಾಗಿ ಮಾಡಲು ನಾವೆಲ್ಲರೂ ಸೌರಶಕ್ತಿಗೆ ಬದಲಾಯಿಸಲು ಪ್ರಯತ್ನಿಸಬೇಕು. ಸೌರಶಕ್ತಿಯು ನಮ್ಮ ಮುಂಬರುವ ಪೀಳಿಗೆಯ ಭವಿಷ್ಯವಾಗಿದೆ. ಇದು ಸುರಕ್ಷಿತ ಮತ್ತು ಆರ್ಥಿಕ ಪರ್ಯಾಯವಾಗಿದೆ. ಇದಲ್ಲದೆ ಇದು ಮರು ಪೂರಣಗೊಳಿಸಬಹುದು ಆದ್ದರಿಂದ ಇದು ಶಕ್ತಿಯ ನವೀಕರಿಸಬಹುದಾದ ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಇದು ಸೂರ್ಯನಿಂದ ಬರುವ ಶಕ್ತಿಯಾಗಿರುವುದರಿಂದ ಅಕ್ಷಯ ಮತ್ತು ಶುದ್ಧ ಸಂಪನ್ಮೂಲವಾಗಿದೆ. ನಮ್ಮ ಗ್ರಹವನ್ನು ಉಳಿಸಲು ನಾವು ಸೌರಶಕ್ತಿಯನ್ನು ಹೆಚ್ಚು ಹೆಚ್ಚು ಬಳಸಲು ಪ್ರಯತ್ನಿಸಬೇಕು.

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :**

(i) ಸೌರಶಕ್ತಿಯಲ್ಲಿ ಕೆಲಸ ಮಾಡುವ ಉಪಕರಣಗಳು

1. ಸೌರಕುಕ್ಕರ್
2. ಹೀಟರ್
3. ವಾಹನ
4. ಕೋಶಗಳು

ಸರಿ ಉತ್ತರದ ಗುಂಪು ಆರಿಸಿ :

(A) 1, 2 ಮತ್ತು 4 (B) 2, 3 ಮತ್ತು 4

(C) 1, 2 ಮತ್ತು 3 (D) 1, 3 ಮತ್ತು 4

(ii) ಅನಿಲ, ಸೀಮೆವಿಣ್ಣೆ ಮತ್ತು ಸೌದೆಗಳಿಗೆ ಪರ್ಯಾಯವಾದುದು

(A) ವಿದ್ಯುತ್ (B) ಪವನಶಕ್ತಿ

(C) ಸೌರಶಕ್ತಿ (D) ಜಲಶಕ್ತಿ

(iii) ನವೀಕರಿಸಲಾಗದ ಶಕ್ತಿಯ ಮೂಲಗಳಿವು

(A) ಪೆಟ್ರೋಲಿಯಂ, ವಿದ್ಯುತ್ (B) ಕಲ್ಲಿದ್ದಲು, ಜಲಶಕ್ತಿ

(C) ಪೆಟ್ರೋಲಿಯಂ, ಜಲಶಕ್ತಿ (D) ಪೆಟ್ರೋಲಿಯಂ, ಕಲ್ಲಿದ್ದಲು

(iv) *ಹೇಳಿಕೆ 1 :* ಸೌರಶಕ್ತಿಯ ಬಳಕೆಯು ವಾಯುಮಾಲಿನ್ಯವನ್ನು ಕಡಿಮೆ ಮಾಡುತ್ತದೆ.

*ಹೇಳಿಕೆ 2 :* ಇದು ಸುರಕ್ಷಿತ ಮತ್ತು ಆರ್ಥಿಕ ಪರ್ಯಾಯವಾಗಿದೆ.

ಸರಿ ಉತ್ತರ ಆರಿಸಿ :

(A) 1 ಸರಿ 2 ತಪ್ಪು (B) ಎರಡೂ ತಪ್ಪು

(C) ಎರಡೂ ಸರಿ (D) 1 ತಪ್ಪು 2 ಸರಿ

(v) ಸೌರಶಕ್ತಿಯು __________ .

(A) ಅಕ್ಷಯ ಮತ್ತು ಅಶುದ್ಧ (B) ಕ್ಷಯ ಮತ್ತು ಶುದ್ಧ

(C) ಅಕ್ಷಯ ಮತ್ತು ಶುದ್ಧ (D) ಕ್ಷಯ ಮತ್ತು ಅಶುದ್ಧ

**3.** ಈ ಕೆಳಗೆ ಕೊಟ್ಟಿರುವ ಸಮಿತಿ ರಚನೆಯ ಭಾಗ್ಯಶಿಲ್ಪಿಗಳು ಪಠ್ಯದಲ್ಲಿನ ಪರಿಚಿತ ಗದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : *5×1=5*

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರಜಾಪತಿ ನಿಧಿ ಸಭೆಯು ನೂತನ ರೂಪವನ್ನು ಪಡೆದು, ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. ಅದಕ್ಕಾಗಿ 1923 ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾ ಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಆರಂಭಿಸಿತು. ಪ್ರಜಾಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ (1 ಜೂನ್ - ಮಹಾರಾಜರ ವರ್ಧಂತಿ, 2 ಅಕ್ಟೋಬರ್ - ದಸರಾ ಮಹೋತ್ಸವ) ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಾಡುವುದು ಮುಂತಾದ ಸಂಸದೀಯ ಮಾದರಿಯ ನಡವಳಿಕೆಗಳು ನಡೆಯುತ್ತಿದ್ದವು. ಪ್ರತಿನಿಧಿ ಸಭೆಯಲ್ಲಿದ್ದ 275 ಸದಸ್ಯರಲ್ಲಿ ಹೆಚ್ಚು ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು.

ನಾಲ್ವಡಿ ಕೃಷ್ಣರಾಜರು 1907 ರಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದರು. ಇದರ ಸದಸ್ಯರ ಸಂಖ್ಯೆ 50. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮುಂದಿನದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

ಕೊಡುಗೆ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ನಗರಪಾಲಿಕೆಗಳು ಹಾಗೂ ಗ್ರಾಮ ಪಂಚಾಯಿತಿಗಳು ಕಾರ್ಯನಿರ್ವಹಿಸಲು ಆರಂಭ ಮಾಡಿದವು. ಇವರ ಕಾಲದಲ್ಲಿ 1 ಗ್ರಾಮ ನಿರ್ಮಲೀಕರಣ 2 ವೈದ್ಯ ಸಹಾಯ 3 ವಿದ್ಯಾ ಪ್ರಸಾರ 4 ನೀರಿನ ಸೌಕರ್ಯ 5 ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು. 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾದರು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರಾರಂಭಿಸಿದರು.

ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :

(i) ಪ್ರಜಾಪ್ರತಿನಿಧಿ ಸಭೆಯನ್ನು ಯಾವಾಗ ಶಾಸನಬದ್ಧ ಸಂಸ್ಥೆಯನ್ನಾಗಿ ಮಾಡಲಾಯಿತು ?

(ii) ಪ್ರಜಾಪ್ರತಿನಿಧಿ ಸಭೆಯಲ್ಲಿ ಯಾವ ಕೆಲಸಗಳನ್ನು ನಡೆಸುತ್ತಿತ್ತು ?

(iii) ನ್ಯಾಯ ವಿಧಾಯಕ ಸಭೆಗೆ ಯಾವ ಅಧಿಕಾರವಿತ್ತು ?

(iv) ಆಡಳಿತ ವಿಕೇಂದ್ರೀಕರಣದ ದೃಷ್ಟಿಯಿಂದ ಕಾರ್ಯನಿರ್ವಹಿಸಲು ಪ್ರಾರಂಭಿಸಿದ ಸ್ಥಳೀಯ ಸಂಸ್ಥೆಗಳನ್ನು ಹೆಸರಿಸಿ.

(v) ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಹೆಸರಾದವರಾರು ?

**4.** ಕೆಳಗೆ ಕೊಟ್ಟಿರುವ ಡಾ. ಬಿ.ಎಸ್. ಗದ್ದಗಿಮಠ ಅವರ ಕನ್ನಡ ಜನಪದ ಗೀತೆಗಳು ಕೃತಿಯಿಂದ ಆಯ್ದ ಪರಿಚಿತ 'ಹಲಗಲಿ ಬೇಡರು' ಲಾವಣಿಯನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : *5×1=5*

ಹೊತ್ತು ಬಂದಿತು ಮತ್ತ ನೊಂದಿರಿ ಕತ್ತಿ ಹಿಡಿಯುವ ಜನಕ

ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೋ ದಡಕ ||ಸ||

ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ

ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ

ಹಲಗರಹಳ್ಳ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ
ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ರ
ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ
ಹೊಡಿರಿ ಜಗಳ ಕೂಡಿ ತೀರ್ತೇವು ಕುಮತಿ ನಮ್ಮದ್ಯಾವತ್ತ
ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ.
ತಾರಕೂನನ ಕಪಾಳಕ ಬಡಿದರ ಸಿಪಾಯಿ ನೆಲಕಬಿತ್ತ
ಅಗಿಂದಾಗ ದುಃಖದ ಸುದ್ದಿ ಸಾಹೇಬಗ ಹೋಯ್ತ ||೧||
ಸಿಟ್ಟಲಿ ಮುಂಗೈ ತಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ
ಕುದರಿ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ
ಒಳಗಿನ ಮಂದಿ ಗುಂಡು ಹೊಡೆದರೊ. ಮುಂಗಾರಿನ ಸಿಡಿಲ ಸಿಡಿದ್ಹಾಂಗ
ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ ಹಿಡಿದು ದಂಗ
ಕಾಗದ ಬರೆದು ಕಳುವ್ಯಾರೆ, ಬೇಗ, ದಂಡು ಬರತೆಂತ ಹೀಂಗ
ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ ||೨||
ಬೆನ್ನಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಂಗ
ನಡುವೆ ಹಾಕ್ಕೊಂಡು ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ
ಚಟೆಕಾರರು ಬೌಕಿ ಮಾಡುತ ನಡಿದರೊ ಹೇಳದೆ ಗುಪದಾಗ
ಅಗಸಿಗೆ ಬಂದು 'ಹೆಬಂತ' ಸಾಬ ಹೇಳತಾನ ಬುದ್ಧಿಮಾತ
ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ
ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ ||೩||

ಜಡಗ ಹೇಳುತಾನೊ ಹೊಡೆಯಿರಿ ಇವರ ಪೂರ ಘಾತಕರಾ
ಇಸವಾಸಘಾತಕ ಮಾಡಿದರಿವರ ನಂಬಿಗಿಲ್ಲ ನಮಗ ಪಿತೂರಾ
ಮೋಸ ಮಾಡಿ ನಮದೇಶ ಗೆದಿತಾರೊ ಮುಂದ ನಮಗ ಘೋರಾ
ಅಂದು ಹೊಡೆವಾನೊ ಒಂದು ಗುಂಡಿಗೆ ಆದ ಸಾಹೇಬನ ಟಾರಾ
'ಕಾರ' ಸಾಹೇಬ ಬೆಂಕಿ ಚೂರಾದ ಲೂಟಿ ಮಾಡಂತನೂ ಊರಾ
ಸಿಟ್ಟಿಲೆ ದೊಡೆದರು ಸಿಡಿಲಸಿಡಿದ್ಹಾಂಗ ಗುಂಡು ಸುರಿದಾದ ಭರಪೂರ
ಹನುಮ ಹೇಳತಾನ ಗುಂಡು ಹೊಡೆದು ಕೆರ ಕೆಡವು ನಷ್ಟಭಾರ
ಮುನ್ನೂರ ಮುಂದಿ ಮೈಮ್ಯಾಗ ಬಂದರ ಆಗ ನೋಡೂ ಜೋರಾ
ಭೀಮನು ಇದುರಿಗೆ ನಿಂತಾ ಐನೂರ್ಮಂದಿಗೆ ಮತ್ತಾ
ಬಾಲನು ಮಾಡಿದ ಕಸರತ್ತ ಕಾಲುವೆ ಹರಿತೊ ರಕ್ತ
ಸಾವಿರ ಅಳಿಗೆ ಒಬ್ಬ ಕೂಗತಾನೊ, ಕಡಿಕಡಿರಿ ಅಂತ ಮತ್ತ

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(i) ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?

(ii) ಹಲಗಲಿಯ ನಾಲ್ವರು ಪ್ರಮುಖರು ಯಾರು ?

(iii) ಹೊಡೆದ ಗುಂಡುಗಳು ಹೇಗೆ ಸಿಡಿದವು ?

(iv) ಅಗಸಿಗೆ ಒಂದು ಬುದ್ಧಿಮಾತು ಹೇಳಿದವರಾರು ?

(v) ಬೆಟೆಗಾರರು ಚೌಕಿ ಮಾಡುತ್ತ ಎತ್ತ ನಡೆದರು.

## ಭಾಗ – B

## (ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) : 20 ಅಂಕಗಳು

**5.** ಕೆಳಗಿನ ಪ್ರತಿಯೊಂದು ಬಹು ಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ : *10×1=10*

(i) ಕೆಳಗೆ ಕೊಟ್ಟಿರುವ ಸಂಧಿ ಸಂಧಿ–ಪದಗಳನ್ನು ಹೊಂದಿಸಿ ಬರೆಯಿರಿ :

| | | | |
|---|---|---|---|
| a. | ಸುರಾಸುರ | 1. | ಆಗಮ ಸಂಧಿ |
| b. | ಕೈಯನ್ನು | 2. | ಗುಣಸಂಧಿ |
| c. | ಜ್ಞಾನೇಶ್ವರ | 3. | ಸವರ್ಣದೀರ್ಘ ಸಂಧಿ |
| d. | ಬಲ್ಲೆನೆಂದು | 4. | ಆದೇಶ ಸಂಧಿ |
| | | 5. | ಲೋಪ ಸಂಧಿ |

(A) a-5, b-4, c-1, d-2
(B) a-2, b-5, c-1, d-3
(C) a-3, b-1, c-2, d-5
(D) a-4, b-5, c-4, d-3

(ii) ಕೆಳಗಿನ ಪದಗಳಲ್ಲಿ ಸರಿಯಾದ ಸಮಾಸ ಪದಗಳನ್ನು ಹೊಂದಿಸಿ ಬರೆಯಿರಿ :

1. ಹನುಮಭೀಮ ರಾಮ – ದ್ವಂದ್ವ ಸಮಾಸ
2. ಕೆಂದಾವರೆ – ಕ್ರಿಯಾಸಮಾಸ
3. ಮೋಸಮಾಡು – ಕರ್ಮಧಾರಯ ಸಮಾಸ
4. ಮುಂಗೈ – ಅಂಶಿ ಸಮಾಸ

ಸರಿ ಉತ್ತರ ಆರಿಸಿ :

(A) 1 ಮತ್ತು 2 (B) 1 ಮತ್ತು 4
(C) 2 ಮತ್ತು 3 (D) 3 ಮತ್ತು 4

(iii) ಹಸಾದ – ಈ ಪದದ ತತ್ಸಮ ರೂಪ

(A) ಪಸಂದ (B) ಹರಿಣ

(C) ಹಸಿದು (D) ಪ್ರಸಾದ

(iv) ಇವುಗಳಲ್ಲಿ ಜೋಡುನುಡಿ ಪದ

(A) ನಟುನಡುವೆ (B) ಹಾಲ್ಜೇನು

(C) ಬೇಗಬೇಗ (D) ತುತ್ತತುದಿ

(v) ಅಬ್ಧಿಪ – ಪದದ ಅರ್ಥ

(A) ಕರಣ (B) ತರುಣ

(C) ಅರುಣ (D) ವರುಣ

(vi) ಮಾಡೋಣ – ಕ್ರಿಯಾಪದದ ಧಾತುರೂಪ

(A) ಮಾಡಿ (B) ಮಾಡು

(C) ಮಾಡ (D) ಮಾಡಿದ

(vii) ತೃತೀಯಾ ವಿಭಕ್ತಿಯ ಕಾರಕಾರ್ಥ

(A) ಸಂಪ್ರದಾನ (B) ಅಪಾದಾನ

(C) ಕರಣಾರ್ಥ (D) ಕರ್ಮಾರ್ಥ

(viii) ಮೂವತ್ತೂ ವಿದ್ಯಾರ್ಥಿಗಳು ಭಾಗವಹಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಕುಮಾರನು ಮೊದಲನೆಯ ಸ್ಥಾನವನ್ನು ಪಡೆದನು – ಇಲ್ಲಿರುವ ಸಂಖ್ಯೇಯವಾಚಕ ಪದ

(A) ಮೂವತ್ತು (B) ಕುಮಾರನು

(C) ವಿದ್ಯಾರ್ಥಿಗಳು (D) ಮೊದಲನೆಯ

(ix) ತಾವು ಚೆನ್ನಾಗಿ ಹಾಡಿದರೆ ಬಹುಮಾನ ಸಿಗುತ್ತದೆ – ಈ ವಾಕ್ಯದಲ್ಲಿರುವ ಆತ್ಮಾರ್ಥಕ ಸರ್ವನಾಮ

(A) ಚೆನ್ನಾಗಿ (B) ತಾವು

(C) ಹಾಡಿದರೆ (D) ಸಿಗುತ್ತದೆ

(x) ಪರ್ವತ : ರೂಢನಾಮ : : ವಿದ್ವಾಂಸ : _________

(A) ಅನ್ವರ್ಥಕನಾಮ (B) ಪಡೆನುಡಿ

(C) ಗುಣವಾಚಕ (D) ಅಂಕಿತನಾಮ

**6.** ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ : *5×1=5*

(i) ನೀವೆಲ್ಲರೂ ಒಂದೇ ಸಾಲಿನಲ್ಲಿ ನಿಲ್ಲಬೇಕು – ಈ ವಾಕ್ಯವನ್ನು ವಿಧ್ಯರ್ಥಕರೂಪದಲ್ಲಿ ಬರೆಯಿರಿ.

(ii) ಕೆಲವರು, ಅಧ್ಯಯನದ ದೃಷ್ಟಿಯಿಂದ ಶೈಕ್ಷಣಿಕ ಪ್ರವಾಸ ಮಾಡುವರು – ವರ್ತಮಾನಕಾಲಕ್ಕೆ ಪರಿವರ್ತನೆ ಬರೆಯಿರಿ.

(iii) ಈ ಪುಸ್ತಕವನ್ನು ಲಲಿತಾಕ್ಷರ ಮುದ್ರಣಾಲಯದಲ್ಲಿ ಮುದ್ರಿಸಿದ್ದಾರೆ – ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

(iv) (a) ಈ ಕೆಳಗಿನ ಗಾದೆಯ ಮಾತಿನ ಅರ್ಥವನ್ನು ಬರೆಯಿರಿ.

ಮಾತೇ ಮುತ್ತು ಮಾತೇ ಮೃತ್ಯ

**ಅಥವಾ (OR)**

(b) ಆಳಾಗಬಲ್ಲವನು ಅರಸಾಗಬಲ್ಲ

(v) ದಾಕ್ಷಿಣ್ಯ – ಈ ಪದವನ್ನು ಬಳಸಿ ಸ್ವಂತ ವಾಕ್ಯವನ್ನು ರಚಿಸಿ ಬರೆಯಿರಿ.

**7.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. *5×1=5*

(i) ಗಾಂಧೀಜಿಯವರು 'ಅನ್‌ಟು ದಿಸ್ ಲಾಸ್ಟ್' ಪುಸ್ತಕವನ್ನು ________ ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದ ಮಾಡಿದ್ದಾರೆ.

(A) ನವೋದಯ (B) ಸತ್ಯಾಗ್ರಹ

(C) ಸರ್ವೋದಯ (D) ಸಹಮತ

(ii) ಪೆರಿಯಾರ್ ಅವರು ________ ಪತ್ರಿಕೆಯನ್ನು ಸುಟ್ಟುಹಾಕಿದರು.

(A) ದ್ರಾವಿಡ ಕಳಗಂ (B) ರಿವೋಲ್ಟ್

(C) ಕಳಗಂ (D) ತಾಯಿನಾಡು

(iii) ಶ್ರೀ ನಾರಾಯಣಗುರು ಅವರು ತಮ್ಮ ____________ ಮೂಲಕ ಸಾಮಾಜಿಕ ಪ್ರತಿರೋಧದ ಚಳವಳಿಯನ್ನು ಪ್ರಾರಂಭಿಸಿದರು.

(A) ಧರ್ಮ ಪರಿಪಾಲನಾ ಯೋಗಂ

(B) ಧರ್ಮ ಸಂರಕ್ಷಣೆ

(C) ಸಹಯೋಗಂ

(D) ಧರ್ಮ ಸಹಿಸ್ಣುತೆ

(iv) ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆಯನ್ನು ಸಂಘಟಿಸಿದ್ದು ________ ರಂದು.

(A) 1919 ರ ಎಪ್ರಿಲ್ 18 (B) 1919 ರ ಮೇ 13

(C) 1919 ರ ಎಪ್ರಿಲ್ 13 (D) 1919 ರ ಮಾರ್ಚ್ 13

(v) ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿ

(A) ಜನರಲ್ ಡಯರ್ (B) ಇರ್ವಿನ್

(C) ವಾರನ್ ಹೆಸ್ಟಿಂಗ್ (D) ಲಾರ್ಡ್ ಕರ್ಜನ್

## ಭಾಗ – C

## (ಬರವಣಿಗೆ ಕೌಶಲ್ಯ) : 12 ಅಂಕಗಳು

**8.** (a) ನಿಮ್ಮ ವಿದ್ಯಾಲಯದಲ್ಲಿ 'ಆರೋಗ್ಯ ತಪಾಸಣಾ ಶಿಬಿರ' ವನ್ನು ಆಯೋಜಿಸುವಂತೆ ವಿನಂತಿಸಿಕೊಂಡು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ. *4*

**ಅಥವಾ (OR)**

(b) ದಿನಾಂಕ 1.2.2024 ರ ಪ್ರಜಾವಾಣಿ ದಿನಪತ್ರಿಕೆಯ ಪ್ರಕಟಣೆಯ ಮೇರೆ 'ಸಿದ್ಧಗಂಗಾ ಪ್ರೌಢಶಾಲೆ, ತುಮಕೂರು ಇಲ್ಲಿಗೆ ಕನ್ನಡ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿ.

**9.** ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣೆ ಕುರಿತು ವರದಿ ತಯಾರಿಸಿ. *4*

**10.** ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : *4*

(i) ಅಕ್ಷರ ದಾಸೋಹದ ಮಹತ್ವ

(ii) ಗ್ರಂಥಾಲಯಗಳ ಮಹತ್ವ

(iii) ಪ್ರತಿಭಾ ಪರಾಯನ

## ಭಾಗ – D

## (ಪದ್ಯಗಳ ಅಧ್ಯಯನ) : 28 ಅಂಕಗಳು

**11.** ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ : *4×2=8*

(i) ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?

(ii) ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?

(iii) ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು ?

(iv) ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸು ಕರಗಿದೆ – ಏಕೆ ?

**12.** ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ : *2×3=6*

(i) 'ವೃಕ್ಷಸಾಕ್ಷಿ' ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ? ಏಕೆ ?

(ii) ಪ್ರಕೃತಿಯ 'ಹಸುರು' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**13.** ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ : *2×3=6*

(i) (a) "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."

**ಅಥವಾ (OR)**

(b) "ಭಗವಂತನ ಗುಣ ಎಂದಾದರೂ ಮನುಷ್ಯರಲ್ಲಿ ಬಂದೀತೆ."

(ii) (a) "ಪ್ರೀತಿಯ ಹಣತೆಯ ಹಚ್ಚೋರಿ."

**ಅಥವಾ (OR)**

(b) "ಮಾರಿಗೌತಣವಾಯ್ತು ನಾಳಿನ ಭಾರತವು."

**14.** ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ : *1×4=4*

(a) 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

**ಅಥವಾ (OR)**

(b) ಗುರೂಪದೇಶವನ್ನು ಯಾರ್‍ಯಾರು ಹೇಗೆ ಸ್ವೀಕರಿಸುತ್ತಾರೆ.

**15.** ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ : *1×4=4*

(a) ದುರ್ಯೋಧನನ ಗೆಳೆಯನಾಗಿ ಹಾಗೂ ಪಾಂಡವರ ಸಹೋದರನಾಗಿ ಕರ್ಣನು ತನ್ನ ಕರ್ತವ್ಯವನ್ನು ಹೇಗೆ ನಿರ್ವಹಿಸಿದನು.

**ಅಥವಾ (OR)**

(b) ಲವನ ನಡವಳಿಕೆ ಮೆಚ್ಚುಗೆಯಾಯಿತೆ ? ಏಕೆ ?